# ವಯಸ್ಕರ ಸಬ್ಬತ್ತು ಶಾಲಾ ಅಧ್ಯಯನ ಮಾರ್ಗದರ್ಶಿ

# ಕೊನೆಯ ಕಾಲಕ್ಕೆ ಸಿದ್ಧರಾಗುವುದು

ಎರಡನೇ ತ್ರೈಮಾಸಿಕ

ಏಪ್ರಿಲ್, ಮೇ, ಜೂನ್ 2018


ಆಂಗ್ಲ ಮೂಲ : **ನಾರ್ಮನ್ ಗುಲೇ**

ಕನ್ನಡ ಭಾವಾನುವಾದ : **ಎನ್. ಅಶೋಕ್ ಕುಮಾರ್**

# ವಯಸ್ಕರ ಸಬ್ಬತ್ತು ಶಾಲಾ ಅಧ್ಯಯನ ಮಾರ್ಗದರ್ಶಿ

## ಎರಡನೇ ತ್ರೈಮಾಸಿಕ – ಏಪ್ರಿಲ್, ಮೇ, ಜೂನ್ 2018

## ಅನುಕ್ರಮಣಿಕೆ


| | | |
|---|---|---|
| 1. | ಮಹಾ ಹೋರಾಟ | ಏಪ್ರಿಲ್ 7 |
| 2. | ದಾನಿಯೇಲ ಮತ್ತು ಕೊನೆಯ ಕಾಲ | ಏಪ್ರಿಲ್ 14 |
| 3. | ಯೇಸು ಮತ್ತು ಪ್ರಕಟನೆಯ ಪುಸ್ತಕ | ಏಪ್ರಿಲ್ 21 |
| 4. | ರಕ್ಷಣೆ ಮತ್ತು ಕೊನೆಯ ಕಾಲ | ಏಪ್ರಿಲ್ 28 |
| 5. | ಪರಲೋಕದ ಗುಡಾರದಲ್ಲಿ ಕ್ರಿಸ್ತನು | ಮೇ 5 |
| 6. | ಆಜ್ಞೆಯ ಬದಲಾವಣೆ | ಮೇ 12 |
| 7. | ಮತ್ತಾಯ 24 ಮತ್ತು 25 | ಮೇ 19 |
| 8. | ಸೃಷ್ಟಿಕರ್ತನನ್ನು ಆರಾಧಿಸಿರಿ | ಮೇ 26 |
| 9. | ಕೊನೆಯ ಕಾಲದ ವಂಚನೆ | ಜೂನ್ 2 |
| 10. | ಅಮೇರಿಕ ಮತ್ತು ಬಾಬೇಲ್ | ಜೂನ್ 9 |
| 11. | ದೇವರ ಮುದ್ರೆಯೋ ಅಥವಾ ಮೃಗದ ಗುರುತೋ | ಜೂನ್ 16 |
| 12. | ಬಾಬೇಲ್ ಮತ್ತು ಹರ್ಮಗೆದೋನ್ | ಜೂನ್ 23 |
| 13. | ನಮ್ಮ ಕರ್ತನಾದ ಯೇಸುವಿನ ಬರೋಣವು | ಜೂನ್ 30 |



**ಆಂಗ್ಲ ಮೂಲ** : ನಾರ್ಮನ್ ಗುಲೇ

**ಕನ್ನಡ ಭಾವಾನುವಾದ : ಎನ್. ಅಶೋಕ್ ಕುಮಾರ್**



**(ವಿ.ಸೂ : ಖಂಡಿತವಾಗಿಯೂ ಖಾಸಗಿ ಉಪಯೋಗಕ್ಕಾಗಿ ಮಾತ್ರ)**

# ಕ್ರಿಸ್ತನು ಮತ್ತು ಕೊನೆಯ ದಿನಗಳು

ಯೇಸುವು ಮಾನವನಾಗಿ ಈ ಲೋಕದ ಯಾತ್ರೆಯ ಮುಕ್ತಾಯ ಮಾಡುವ ಕೊನೆಯ ದಿನಗಳಲ್ಲಿ ಈ ಸಂತೈಸುವಿಕೆಯ ಮಾತುಗಳನ್ನು ತನ್ನ ಶಿಷ್ಯರಿಗೆ ಹೇಳಿದನು.

ನಿಮ್ಮ ಹೃದಯವು ಕಳವಳಗೊಳ್ಳದೆ ಇರಲಿ; ದೇವರನ್ನು ನಂಬಿರಿ, ನನ್ನನ್ನೂ ನಂಬಿರಿ. ನನ್ನ ತಂದೆಯ ಮನೆಯಲ್ಲಿ ಬಹಳ ಬಿಡಾರಗಳು ಅವೇ; ಇಲ್ಲದಿದ್ದರೆ ನಿಮಗೆ ಹೇಳುತ್ತಿದ್ದೇನು; ನಿಮಗೆ ಸ್ಥಳವನ್ನು ಸಿದ್ದ ಮಾಡುವುದಕ್ಕೆ ಹೋಗುತ್ತೇನಲ್ಲಾ. ನಾನು ಹೋಗಿ ನಿಮಗೆ ಸ್ಥಳವನ್ನು ಸಿದ್ದ ಮಾಡಿದ ಮೇಲೆ ತಿರುಗಿ ಬಂದು ನಿಮ್ಮನ್ನು ಕರೆಕೊಂಡು ಹೋಗಿ ನನ್ನ ಬಳಿಗೆ ಸೇರಿಸಿಕೊಳ್ಳುವೇನು; ಯಾಕೆಂದರೆ ನಾನಿರುವ ಸ್ಥಳದಲ್ಲಿ ನೀವು ಸಹ ಇರಬೇಕು ಮತ್ತು ನಾನು ಹೋಗುವ ಸ್ಥಳದ ಮಾರ್ಗವು ನಿಮಗೆ ತಿಳಿದಿದೆ ಅಂದನು ಯೋಹಾನ 14:1–4.

ಅವರು ಯೇಸುವಿನ ಮಾತುಗಳಿಂದ ಹೆಚ್ಚಿನ ಸಮಾಧಾನವನ್ನು ಆ ಸಮಯದಲ್ಲಿ ಹೊಂದದೆ ಹೋದರು ಕೂಡ ಮತ್ತು ಅದು ಅವರಿಗೆ ಯಾವಾಗ ನೆರವೇರುವುದು ಎಂದು ಅರ್ಥವಾಗದೆ ಹೋದರು ಕೂಡ ಯೇಸುವಿನ ಮಾತುಗಳಿಂದ ಸಾಂತ್ವಾನವನ್ನು ಹೊಂದಿದರು. ತಂದೆಯ ಮನೆಯಲ್ಲಿ ಸ್ಥಳ? ಆ ಸ್ಥಳವನ್ನು ಯೇಸುವು ತಾನೇ ಅವರಿಗಾಗಿ ಸಿದ್ದ ಪಡಿಸಿದನು? ಈ ಲೋಕದಲ್ಲಿ ಯಾರು ಹುಡುಕಿದರೂ ಕೂಡ ಸಿಗಲಾರದ ಶ್ರೇಷ್ಠವಾದ ಸ್ಥಳವು ಇದಾಗಿರುತ್ತದೆ.

ಇದಕ್ಕಿಂತ ಮುಂಚೆ ಯೇಸು ಅವರ ಜೊತೆಯಲ್ಲಿ ಕುಳಿತಿರುವಾಗ ಲೋಕದ ಅಂತ್ಯದಲ್ಲಿ ಏನೇನೂ ಕಾರ್ಯಗಳು ನಡೆಯುತ್ತವೆ ಎಂಬುದರ ಕುರಿತಾಗಿ ಒಂದು ಮುನ್ನೋಟವನ್ನು ನೀಡಿದನು. ಇದೊಂದು ರೀತಿಯಲ್ಲಿ ಭವಿಷ್ಯದ ಚರಿತ್ರೆಯಾಗಿತ್ತು. ಅದು ಅಷ್ಟೊಂದು ಸುಂದರವಾಗಿರಲಿಲ್ಲ. ಯುದ್ದಗಳು, ಯುದ್ದಗಳ ಸಮಾಚಾರಗಳು, ರಾಜ್ಯಕ್ಕೆ ವಿರುದ್ದವಾಗಿ ರಾಜ್ಯಗಳು, ಬರಗಾಲಗಳು, ಭೂಕಂಪಗಳು ಎಲ್ಲವೂ ಸೇರಿದ್ದವು. ಯೇಸುವು ಇದನ್ನು ಎಲ್ಲಾ ದುಃಖದ ಆರಂಭ ಎಂದು

ಹೇಳಿದನು. ಹಿಂಸೆ, ಹಿಡಿದುಕೊಡುವುದು, ವಂಚನೆಗಳು, ಮತ್ತು ಎಲ್ಲಾ ವಿಧವಾದ ಹಿಂಸೆಗಳು ಇದರಲ್ಲಿ ಸೇರಿದ್ದವು.

ಇಂದು ಚರಿತ್ರೆಯುದ್ದಕ್ಕೂ ನಾವು ತಿರುಗಿ ನೋಡಿದರೆ ಯೇಸುವು ಹೇಳಿದ ಎಲ್ಲವೂ ಕೂಡ ನೆರವೇರಿದೆ ಮತ್ತು ಆತನು ಹೇಳಿದ ಪ್ರಕಾರವೇ ಎರಡು ಮುಖ್ಯವಾದ ಸಮಯದ ಪ್ರವಾದನೆಗಳು ನೆರವೇರಿವೆ. ಮೊದಲನೇಯದು ದಾನಿಯೇಲ 7:25 ರ ಕಾಲ ಮತ್ತು ಕಾಲಗಳು ಮತ್ತು ಅರ್ಧಕಾಲ ಪ್ರವಾದನೆ. (ಪ್ರಕಟನೆ 12:6,14; 13:5; ಅರಣ್ಯಕಾಂಡ 14:34), ಇದು ಕ್ರಿ.ಶ. 538 ರಲ್ಲಿ ಆರಂಭವಾಗಿ ಹದಿನೆಂಟನೇಯ ಶತಮಾನದ ಕೊನೆಯಲ್ಲಿ (ಕ್ರಿ . ಶ. 1798 ರಲ್ಲಿ ಅಂತ್ಯವಾಯಿತು. ಮತ್ತು ಅತೀ ಉದ್ದನೇಯ ಪ್ರವಾದನೆ ದಾನಿಯೇಲ 8:14 ರ 2300 ದಿನಗಳ ಪ್ರವಾದನೆಯು ಕೂಡ 1844 ರಲ್ಲಿ ನೆರವೇರಿತು.

ನಿಜವಾಗಲೂ ಕೂಡ ನಾವು ಕೊನೆಯ ಕಾಲದಲ್ಲಿ ಜೀವಿಸುತ್ತಿದ್ದೇವೆ (ದಾನಿಯೇಲ 12:13). ಆದರೆ ಎರಡನೇಯ ಬರೋಣ ಯಾವಗ ಬರುತ್ತದೆ ಎಂಬುದು ನಮಗೆ ಗೊತ್ತಿಲ್ಲ ಮತ್ತು ಅದರ ಕುರಿತಾಗಿ ನಮಗೆ ತಿಳಿಯುವ ಅವಶ್ಯಕತೆ ಇಲ್ಲ. ಅದು ಬರುತ್ತದೆ ಎಂದು ನಮಗೆ ಗೊತ್ತು ಅದು ಬರುವಾಗ ನಾವು ಸಿದ್ದರಾಗಿರಬೇಕು.

ಹೇಗೆ? ಇದಕ್ಕೆ ಸರಿಯಾದ ಉತ್ತರ ಈ ವಚನದಲ್ಲಿ ಸಿಗುತ್ತದೆ. ಆದದರಿಂದ ನೀವು ಕರ್ತನಾದ ಯೇಸುವೆಂಬ ಕ್ರಿಸ್ತನನ್ನು ಅಂಗಿಕರಿಸಿದಂತೆಯೇ ಆತನಲ್ಲಿದ್ದವರಾಗಿ ನಡೆದುಕೊಳ್ಳಿರಿ (ಕೊಲೆಸ್ಸಿ 2:6). ಮತ್ತೊಂದು ಮಾತಿನಲ್ಲಿ ಹೇಳುವುದಾದರೆ, ಲೋಕದ ಅನೇಕ ಘಟನೆಗಳ ನಡುವೆಯೂ, ಅನೇಕ ಸಮಾಚಾರಗಳ ನಡುವೆಯೂ, ಕೊನೆಯ ಕಾಲದ ಕುರಿತಾಗಿ ಅನೇಕ ಊಹೆಗಳ ನಡುವೆಯೂ, ನಮ್ಮ ಮನಸ್ಸು ವಿಚಲಿತವಾಗುವುದು ಬಹಳ ಸುಲಭ ಕ್ರಿಸ್ತನ ಬರೋಣದ ಕುರಿತಾದ ವಿಷಯಗಳಿಗೆ ಹೆಚ್ಚಿನ ಪ್ರಾಧಾನ್ಯತೆಯನ್ನು ನೀಡುತ್ತಾ ಕ್ರಿಸ್ತನನ್ನು ಮರೆಯುವುದು ಬಹಳ ಸುಲಭ ಆತನು ಮಾತ್ರ ನಮ್ಮ ಸಿದ್ದತೆಯ ಮೂಲವಾಗಿರಬೇಕು.

ಈ ತ್ರೈಮಾಸಿಕದ ಕೇಂದ್ರ ಬಿಂದು ಕೊನೆಯ ಕಾಲವಾಗಿದೆ, ಅದು ಸಂಪೂರ್ಣವಾಗಿ ಅಲ್ಲದ್ದಿದರೂ ಕೂಡ ನಮ್ಮ ನಿಜವಾದ ಕೇಂದ್ರಬಿಂದು ಯೇಸುವಾಗಿದ್ದಾನೆ, ಆದರೆ ಕೊನೆಯ ದಿನಗಳ ಹಿನ್ನಲೆಯಲ್ಲಿ ಅವುಗಳನ್ನು ಹೇಗೆ ಎದುರಿಸುವುದು ಎಂಬುದರ ಅಧ್ಯಯನವಾಗಿದೆ. ಹೌದು, ನಾವು ಚರಿತ್ರೆಯ ದಿನಾಂಕಗಳನ್ನು ನೋಡಬೇಕು, ಪ್ರಪಂಚದ ಘಟನೆಗಳನ್ನು ಗಮನಿಸಬೇಕು, ಮತ್ತು ಚರಿತ್ರೆಯನ್ನು ಸಹ ನೋಡಬೇಕು. ಯಾಕೆಂದರೆ ಕೊನೆಯ ಕಾಲದ ಸಂಬಂಧದಲ್ಲಿ ಸತ್ಯವೇದವು ಅದರ ಕುರಿತಾಗಿ ಮಾತನಾಡುತ್ತದೆ. ಆದರೂ ಸಹ ಈ ಹಿನ್ನಲೆಯಲ್ಲಿ ಸತ್ಯವೇದವು ಕ್ರಿಸ್ತನ ಕುರಿತಾಗಿ ಮಾತನಾಡುತ್ತದೆ, ಆತನು ಯಾರು, ಆತನು ನಮಗಾಗಿ ಏನು ಮಾಡಿದ್ದಾನೆ, ಆತನು ನಮ್ಮಲ್ಲಿ ಏನು ಮಾಡುತ್ತಾನೆ ಮತ್ತು ಆತನು ಹಿಂತಿರುಗಿ ಬರುವಾಗ ಆತನು ಏನು ಮಾಡುತ್ತಾನೆ. ಯೇಸುವು ಮತ್ತು ಶಿಲುಬೆಗೆ ಹಾಕಲ್ಪಟ್ಟ ಯೇಸುವು ಮಾತ್ರ ನಮ್ಮ ವಿಶ್ವಾಸದ ಮೂಲವಾಗಿರಬೇಕು. ಪೌಲನು ಹೇಳುವ ಹಾಗೆ ನಾನು ಶಿಲುಬೆಗೆ ಹಾಕಲ್ಪಟ್ಟ ವನಾದ ಯೇಸು ಕ್ರಿಸ್ತನನ್ನೇ ಹೊರೆತು ಬೇರೆ ಯಾವದನ್ನೂ ತಿಳಿಯದವನಾಗಿ ನಿಮ್ಮಲ್ಲಿ ಇರುವನೆಂದು ತೀರ್ಮಾನಿಸಿಕೊಂಡೆನು. (1 ಕೊರಿಂಥ 2:2). ನಾವು ಎಷ್ಟು ಆತನ ಮೇಲೆ ದೃಷ್ಟಿಯನ್ನು ಇಡುತ್ತೇವೋ ಅಷ್ಟರಮಟ್ಟಿಗೆ ಆತನ ಹಾಗೆ ಬದಲಾಗುತ್ತೇವೆ ಮತ್ತು ಹೆಚ್ಚಿನ ರೀತಿಯಲ್ಲಿ ಆತನಿಗೆ ವಿಧೇಯತೆಯನ್ನು ತೋರಿಸುತ್ತೇವೆ ಆತನ ಬರೋಣಕ್ಕೆ ಹೆಚ್ಚಿನ ರೀತಿಯಲ್ಲಿ ಸಿದ್ದರಾಗುತ್ತೇವೆ ಮತ್ತು ಈಗಿನ ಭವಿಷ್ಯಕ್ಕೆ ಸಿದ್ದರಾಗುತ್ತೇವೆ ಮತ್ತು ಆತನನ್ನು ಪ್ರಿತಿಸುವವರಿಗಾಗಿ ಯೇಸುವು ಸಿದ್ದಪಡಿಸುತ್ತಿರುವ ಸ್ಥಳ ವನ್ನು ಸೇರವ ದಿನಕ್ಕಾಗಿ ಕಾಯುತ್ತೇವೆ.

**ನಾರ್ಮನ್ ಅರ್. ಗುಲೇ ಪಿ.ಹೆಚ್.ಡಿ., ಇವರು ದಕ್ಷಿಣ ಅಡ್ವೆಂಟಿಸ್ಟ್ ವಿಶ್ವವಿದ್ಯಾಲಯದಲ್ಲಿ ಸಿಸ್ಟಾಮ್ಯಾಟಿಕ್ ಥಿಯಾಲಜಿ ಯಲ್ಲಿ ಸಂಶೋಧನೆಯ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.**

* * * * *